

# ಕನ್ನಡ ಪೋಸ್ಟ್

ಇದು ಸುದ್ದಿ ವಿಲಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 214 | Pages. 2 | Date: 04-07-2025, FRIDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 214 - ಪುಟಗಳು : 2 - 04 ಜುಲೈ 2025 ಶುಕ್ರವಾರ Ph: 8762954248 ದರ : ₹1

# ಹೃದಯಘಾತ: ಆಸ್ಪತ್ರೆಗೆ ಜನರ ದಾಂಗುಡಿ

## ಇಸಿಜಿ-ಎಕೋ ಪರೀಕ್ಷೆಗೆ ಹೆಚ್ಚಿದ ಬೇಡಿಕೆ | ಭಯ ಬೇಡ-ಇರಲಿ ಎಚ್ಚರ



ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ಜಿಲ್ಲೆಯಲ್ಲಿ ಹೃದಯಾಘಾತದಿಂದ ಮೃತರ ಸಂಖ್ಯೆಹೆಚ್ಚುತ್ತಿದೆ ಎಂಬ ಆತಂಕದಿಂದ ಸಾರ್ವಜನಿಕರು ಆಸ್ಪತ್ರೆಗೆ ಲಗ್ಗೆಯಿಡುತ್ತಿದ್ದು ಇಕೋ-ಇಸಿಜಿ ತಪಾಸಣೆಗೆ ಮುಗಿಬೀಳುತ್ತಿದ್ದಾರೆ.

ನಗರದ ಹಿಮ್ಸ್ ಸೇರಿ ಖಾಸಗಿ ಆಸ್ಪತ್ರೆಗಳಲ್ಲಿ ಪರೀಕ್ಷೆಗೆ ಬರುತ್ತಿರುವವರ ಸಂಖ್ಯೆಯಲ್ಲಿ ಭಾರೀ ಏರಿಕೆಯಾಗಿದೆ. ಮೊದಲು ದಿನಕ್ಕೆ 600 ರಿಂದ 700 ಜನರು ಪರೀಕ್ಷೆ ಮಾಡಿಸಿಕೊಳ್ಳುತ್ತಿದ್ದರು. ಈಗ ದಿನಕ್ಕೆ 1 ಸಾವಿರದ ವರೆಗೆ ಜನರು ಪರೀಕ್ಷೆ ಮಾಡಿಸಿಕೊಳ್ಳಲು ಬರುತ್ತಿದ್ದಾರೆ ಎಂದು ಹಿಮ್ಸ್ ನಿರ್ದೇಶಕ ಡಾ. ಬಿ. ರಾಜಣ್ಣ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿದ ಅವರು, ಜಿಲ್ಲೆಯಲ್ಲಿ ಹೃದಯಾಘಾತದಿಂದಲೇ ಅಧಿಕ ಸಾವು ಸಂಭವಿಸುತ್ತಿದೆ ಎಂದು ಮಾಧ್ಯಮಗಳಲ್ಲಿ ವರದಿ ಬರುತ್ತಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರಲ್ಲಿ ಆತಂಕ ಮೂಡಿರುವುದು ಸಹಜ. ಆದರೆ ಅಷ್ಟೊಂದು ಭಯ ಪಡುವುದು ಬೇಡ. ಸದ್ಯದ ಮಾಹಿತಿ ಪ್ರಕಾರ ಹೃದಯ ಸಂಬಂಧಿ ಕಾಯಿಲೆಯಿಂದ ಶೇ. 40 ಮಂದಿ ಸಾವಪ್ಪಿರಬಹುದು. ಶೇ. 50-60 ರಷ್ಟು ಸಾವಿಗೆ ಬೇರೆ ಕಾರಣ ಇರಬಹುದು ಎಂದರು. ಎದೆನೋವಿಗೂ ಬೇರೆ ಬೇರೆ ಕಾರಣಗಳಿವೆ. ಆ ಅನುಭವ ಆದ ತಕ್ಷಣ ಹತ್ತಿರದ ಕಾರ್ಡಿಯಾಕ್ ಕೇಂದ್ರಗಳಿಗೆ ತೆರಳಿ ವೈದ್ಯರ ಸಲಹೆ ಪಡೆಯುವುದು ಉತ್ತಮ. ಹಾಗೆಯೇ ಮುನ್ನೆಚ್ಚರಿಕೆ ವಹಿಸುವುದು ಅತ್ಯಗತ್ಯ ಎಂದರು.

### ಮೃತರ ಮನೆಗಳಿಗೆ ಭೇಟಿ

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಸಭೆ ನಡೆಸಿ ಸರಣಿ ಸಾವಿಗೆ ನಿಖರ ಕಾರಣ ತಿಳಿಯಲು ತಂಡ ರಚನೆ ಮಾಡಲು ಸೂಚಿಸಿದ್ದಾರೆ. ಮೃತಪಟ್ಟವರ ಮನೆಗಳಿಗೆ ತೆರಳಿ ಕುಟುಂಬ ಸದಸ್ಯರಿಂದ ವರದಿ ಪಡೆಯಲು ಹೇಳಿದ್ದಾರೆ. ಅದಕ್ಕಾಗಿ ಜಯದೇವ ಆಸ್ಪತ್ರೆ ನಿರ್ದೇಶಕರ ಸಲಹೆ-ಸೂಚನೆ, ಮಾರ್ಗದರ್ಶನಕ್ಕೆ ಕಾಯುತ್ತಿದ್ದೇವೆ ಎಂದರು.

ಹಾಗೆಯೇ ಸತ್ತವರಿಗೆ ಚಿಕಿತ್ಸೆ ನೀಡಿದ ವೈದ್ಯರಿಂದ ಮಾಹಿತಿ ಪಡೆಯಲು ಹೇಳಿದ್ದಾರೆ. ಅಸ್ವಾಭಾವಿಕ ಸಾವಿನಿಂದ ಮೃತಪಟ್ಟ ಎಲ್ಲರನ್ನೂ ಕಡ್ಡಾಯವಾಗಿ ಮರಣೋತ್ತರ ಪರೀಕ್ಷೆಗೆ ಒಳಪಡಿಸಲು ನಿರ್ದೇಶನ ನೀಡಿದ್ದಾರೆ ಎಂದರು.

ಹಿಮ್ಸ್‌ನಲ್ಲಿ ತುರ್ತು ಚಿಕಿತ್ಸೆಗೆ ಬೇಕಾದ ಐಸಿಯು ಸೇರಿ ಎಲ್ಲ ವ್ಯವಸ್ಥೆ ಮಾಡಿಕೊಳ್ಳಲು ಸೂಚಿಸಿದ್ದಾರೆ. ಹಾಗೆಯೇ ಎಲ್ಲ ತಾಲ್ಲೂಕು ಆಸ್ಪತ್ರೆಗಳಲ್ಲೂ ಚಿಕಿತ್ಸಾ ಸೌಲಭ್ಯ ಹೊಂದಿಸಿಕೊಳ್ಳಲು ಹೇಳಿದ್ದಾರೆ. ಅದರಂತೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಬೇಕಾದ ಔಷಧಿ ಹೊಂದಿಸಿಕೊಳ್ಳಲಾಗಿದೆ. ಹಿಮ್ಸ್‌ನಲ್ಲಿ ಒಬ್ಬರು ಕಾರ್ಡಿಯಾಲಾಜಿಸ್ಟ್ ಇದ್ದು, ಕ್ಯಾಥ್ ಲ್ಯಾಬ್‌ಗಾಗಿ ರಾಜ್ಯ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಹಣಕಾಸು ಸಮಿತಿ ಮುಂದೆ ಮಂಡಿಸುವಂತೆ ಸರ್ಕಾರದಿಂದ ಸೂಚನೆ ಬಂದಿದೆ ಎಂದರು.

ಎದೆನೋವು ಎಂದು ಮೇ ನಲ್ಲಿ 48, ಜೂನ್‌ನಲ್ಲಿ 52 ಮಂದಿ ಬಂದಿದ್ದರು. ಎಲ್ಲರಿಗೂ ಚಿಕಿತ್ಸೆ ನೀಡಲಾಗಿದೆ. ಯಾರೂ ಮೃತಪಟ್ಟಿಲ್ಲ ಎಂದು ವಿವರಣೆ ನೀಡಿದರು.

ಹೃದಯಾಘಾತ ತಡೆಗೆ ಮಾಂಸಾಹಾರ, ಮದ್ಯಪಾನ, ಧೂಮಪಾನ ಕಡಿಮೆ ಮಾಡುವುದು, ಯೋಗ, ಆಟಗಳಲ್ಲಿ ತೊಡಗುವ ಮೂಲಕ ಜೀವನ ಶೈಲಿ ಬದಲಿ ಮಾಡಿಕೊಳ್ಳುವುದು, ಸದಾ ಕ್ರಿಯಾಶೀಲರಾಗುವುದು ಒಳಿತು ಎಂದು ಸಲಹೆ ನೀಡಿದರು.

### ತನಿಖಾ ತಂಡ ಕಾರ್ಯೋನ್ಮುಖ:

ಈ ನಡುವೆ ಸರಣಿ ಹೃದಯಾಘಾತ, ಸಾವಿಗೆ ನಿಖರ ಕಾರಣ ಪತ್ತೆಗಾಗಿ ಅಧ್ಯಯನ ತಂಡ ಕಾರ್ಯೋನ್ಮುಖವಾಗಿದೆ. ಜಿಲ್ಲೆಯ ವಿವಿಧೆಡೆ ಮೃತಪಟ್ಟಿರುವವರ ಮನೆಗಳಿಗೆ ಬೆಳಗ್ಗೆಯಿಂದ ತಡರಾತ್ರಿವರೆಗೂ ತೆರಳಿ ಕುಟುಂಬ ಸದಸ್ಯರಿಂದ ಮಾಹಿತಿ ಕಲೆ ಹಾಕುತ್ತಿದೆ. ತಾಲ್ಲೂಕಿನ ಮುಟ್ಟನಹಳ್ಳಿ ಸಣ್ಣಪ್ಪಶೆಟ್ಟಿ ಅವರ ಮನೆಗೆ ಭೇಟಿ ನೀಡಿ ಮೃತದೇಹದ ಮರಣೋತ್ತರ ಪರೀಕ್ಷೆಗೆ ತಂಡ ಮನವಿ ಮಾಡಿತು. ಪಿಎಂ ನಡೆದು ಸಾವಿಗೆ ನೈಜ ಕಾರಣ ಗೊತ್ತಾದರೆ ಎಲ್ಲರಿಗೂ ಅನುಕೂಲವಾಗಲಿದೆ ಎಂದು ಮನವರಿಕೆ ಮಾಡಿತು. ತಂಡದಲ್ಲಿ ಡಿಹೆಚ್‌ಒ ಡಾ.ಅನಿಲ್, ಆರ್‌ಸಿಹೆಚ್ ಡಾ.ಚೇತನ್ ಹಾಗೂ ಇತರೆ ಅಧಿಕಾರಿಗಳು ಇದ್ದಾರೆ.

## ಮತ್ತೆ ನಾಲ್ವರ ಸಾವು

ಜಿಲ್ಲೆಯಲ್ಲಿ ಹೃದಯಾಘಾತದಿಂದ ಸರಣಿ ಸಾವು ಪ್ರಕರಣ ಬೆಚ್ಚಿ ಬೀಳಿಸಿದೆ. ಬುಧವಾರ ಮತ್ತು ಗುರುವಾರ ಎರಡು ದಿನಗಳ ಅಂತರದಲ್ಲಿ ನಾಲ್ವರು ಮೃತಪಟ್ಟಿದ್ದು ಒಟ್ಟು ಸಾವಿನ ಸಂಖ್ಯೆ 31ಕ್ಕೆ ಏರಿಕೆಯಾಗಿದೆ.

20 ವರ್ಷದೊಳಗಿನ ನಾಲ್ವರು ಯುವಕ-ಯುವತಿಯರು, 20-50 ವರ್ಷಗಳ ನಡುವಿನ 14 ಜನ ಹಾಗೂ 50 ವರ್ಷ ಮೇಲ್ಪಟ್ಟ 14 ಮಂದಿ ಸೇರಿ ಜಿಲ್ಲೆಯಲ್ಲಿ ಕಳೆದ 43 ದಿನಗಳ ಅಂತರದಲ್ಲಿ ಒಟ್ಟು 32 ಮಂದಿ ಜೀವ ತೆತ್ತಿದ್ದಾರೆ. ಎದೆ ನೋವು ಮತ್ತಿತರ ಸಮಸ್ಯೆ ಕಾಣಿಸಿಕೊಳ್ಳುತ್ತಿದ್ದಂತೆಯೇ ಆಸ್ಪತ್ರೆಗೆ ಬಂದರೂ, ಚಿಕಿತ್ಸೆ ಪಡೆಯುವ ಮುನ್ನವೇ ಉಸಿರು ಚೆಲ್ಲುತ್ತಿದ್ದಾರೆ.

ನಗರದ ಕರೀಗೌಡ ಕಾಲನಿಯ ಸಂಪತ್ ಕುಮಾರ್ ಎಂಬುವರು ಬುಧವಾರ ಹೃದಯಾಘಾತಕ್ಕೆ ಬಲಿಯಾಗಿದ್ದಾರೆ. ಎದೆನೋವು ಕಾಣಿಸಿಕೊಂಡ ಅವರನ್ನು ಕೂಡಲೇ ಕುಟುಂಬಸ್ಥರು ಹಿಮ್ಸ್ ಆಸ್ಪತ್ರೆಗೆ ಕರೆತಂದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಮತ್ತೊಂದೆಡೆ ಆಲೂರು ತಾಲ್ಲೂಕಿನ ಕಲ್ಲಾರೆ ಗ್ರಾಮದ ಕಾರಗೋಡು ಗ್ರಾ.ಪಂ. ಸದಸ್ಯ ಸಂತೋಷ್ (41) ಹೃದಯಾಘಾತಕ್ಕೆ ಬಲಿಯಾಗಿದ್ದಾರೆ. ರಾತ್ರಿ ಮಲಗಿದ್ದಲ್ಲಿಯೇ ಸಂತೋಷ್‌ಗೆ ಹೃದಯಾಘಾತವಾಗಿದೆ. ಬೆಳಿಗ್ಗೆ ಮೇಲೇಳದಿದ್ದಾಗ ಆತಂಕಗೊಂಡ ಕುಟುಂಬಸ್ಥರು, ಹಾಸನದ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಬರುವ ವೇಳೆಗೆ ಮೃತಪಟ್ಟಿದ್ದರು.

ಸಕಲೇಶಪುರ ತಾಲ್ಲೂಕು ಬೆಳಗೋಡು ಹೋಬಳಿ ಚಿಕ್ಕನಾಯಕನಹಳ್ಳಿ ಗ್ರಾಮದ ಸಿ.ಬಿ.ವಿರೂಪಾಕ್ಷ (70) ಎಂಬುವರೂ ಹಾರ್ಟ್ ಅಟ್ಯಾಕ್‌ನಿಂದ ಪ್ರಾಣ ತೆತ್ತಿದ್ದಾರೆ. ಬುಧವಾರ ರಾತ್ರಿ 11:30 ರ ಸುಮಾರಿನಲ್ಲಿ ವಿರೂಪಾಕ್ಷ ಅವರಿಗೆ ಎದೆನೋವು ಕಾಣಿಸಿಕೊಂಡಿದೆ. ತಕ್ಷಣ ಅವರನ್ನು ಸಕಲೇಶಪುರ ಕ್ರಾಫರ್ಡ್ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗ ಮಾರ್ಗ ಮಧ್ಯೆಯೇ ಸಾವನ್ನಪ್ಪಿದ್ದಾರೆ.

ಅದೇ ತಾಲ್ಲೂಕಿನ ಅರೆಕೆರೆ ಗ್ರಾಮದಲ್ಲಿ ದೇವಮ್ಮ (72) ಎಂಬ ವೃದ್ಧೆ ಹೃದಯಾಘಾತಕ್ಕೆ ಉಸಿರು ಚೆಲ್ಲಿದ್ದಾರೆ. ಕಳೆದ ಹಲವು ದಿನಗಳಿಂದ ಇವರಿಗೆ ಹೃದಯ ಸಂಬಂಧಿ ಸಮಸ್ಯೆ ಇತ್ತು. ಹೀಗಾಗಿ ಬೆಂಗಳೂರಿನ ಜಯದೇವ ಆಸ್ಪತ್ರೆಗೆ ತೆರಳಿ ವೈದ್ಯರ ಸಲಹೆ ಹಾಗೂ ಔಷಧಿ ಪಡೆದು ವಾಪಸ್ಸಾಗುತ್ತಿದ್ದರು. ಬುಧವಾರ ಸಹ ಆಸ್ಪತ್ರೆಗೆ ತೆರಳಿ ವೈದ್ಯರಿಗೆ ತೋರಿಸಿಕೊಂಡು ಬೆಂಗಳೂರಿನಿಂದ ಮನೆಗೆ ಬರುತ್ತಿರುವಾಗ ಮಾರ್ಗಮಧ್ಯೆ ಅಸುನೀಗಿದ್ದಾರೆ.

## ಮೀನುಗಾರರು ಆರ್ಥಿಕವಾಗಿ ಸದೃಢರಾಗಿ: ಸಿಮೆಂಟ್ ಮಂಜು



ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ಸರ್ಕಾರ ನೀಡುವ ಸಲಕರಣೆಗಳ ಸದುಪಯೋಗಪಡಿಸಿಕೊಂಡು ಮೀನುಗಾರರು ಆರ್ಥಿಕವಾಗಿ ಚೇತರಿಕೆ ಕಾಣಬೇಕು. ಮಕ್ಕಳನ್ನು ವಿದ್ಯಾವಂತರನ್ನಾಗಿಸಬೇಕೆಂದು ಶಾಸಕ ಸಿಮೆಂಟ್ ಮಂಜು ಸಲಹೆ ನೀಡಿದರು.

ತಾಲ್ಲೂಕಿನ ಗೊರೂರು ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಮೀನುಗಾರರಿಗೆ ಸಲಕರಣೆ ವಿತರಿಸಿ ಮಾತನಾಡಿ, ರೈತರಂತೆಯೇ ಮೀನುಗಾರರು ಸಹ ಜನರಿಗೆ ಆಹಾರವನ್ನು ಪೂರೈಸುವ ಕೆಲಸ ಮಾಡುತ್ತಾರೆ. ಅವರ ಜೀವ ರಕ್ಷಣೆ ಸರ್ಕಾರದ ಹೊಣೆಯಾಗಿದೆ. ಈ ನಿಟ್ಟಿನಲ್ಲಿ ಮೀನುಗಾರರ ಸುರಕ್ಷತೆಯ ದೃಷ್ಟಿಯಿಂದ ತೆಪ್ಪ, ದೋಣಿ, ಬಲೆ ಮತ್ತು ಲೈಫ್ ಜಾಕೆಟ್‌ಗಳನ್ನು ವಿತರಿಸಲಾಗುತ್ತಿದೆ. ಅದನ್ನು ಪಡೆದ ಮೀನುಗಾರರು ಅದರಲ್ಲಿ ಬರುವ ಆದಾಯದಲ್ಲಿ ಉತ್ತಮ ರೀತಿ ಕುಟುಂಬ ಸಾಗಿಸುವಂತಾಗಬೇಕು. ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಬೇಕೆಂದು ತಿಳಿಸಿದರು. ಮುಂದಿನ ದಿನಗಳಲ್ಲಿ ಮೀನುಗಾರರಿಗೆ ಸಹಾಯವಾಗುವಂತಹ ಅತ್ಯಾಧುನಿಕ ಸಲಕರಣೆಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು. ಸಲಕರಣೆ ಪಡೆದ ಫಲಾನುಭವಿಗಳು ಉತ್ತಮ ರೀತಿಯಲ್ಲಿ ಬಳಸಿಕೊಳ್ಳಬೇಕು. ವಸತಿ ಸೌಲಭ್ಯವಿಲ್ಲದ ಮೀನುಗಾರರ ಕುಟುಂಬಗಳನ್ನು ಗುರುತಿಸಿ ಸೌಲಭ್ಯ ನೀಡಲಾಗುವುದು. ಅರ್ಹ ಫಲಾನುಭವಿಗಳು ಅರ್ಜಿ ಸಲ್ಲಿಸಬೇಕೆಂದರು.

ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ವಿಕಾಸ್, ಗ್ರಾಮ ಪಂಚಾಯಿತಿ ಅಧ್ಯಕ್ಷ ನಿಂಗರಾಜು, ಗ್ರಾ.ಪಂ. ಸದಸ್ಯೆ ಪಾರ್ವತಮ್ಮ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನಟರಾಜ್, ಹರೀಶ್ ಕೊಡರಾಮನಹಳ್ಳಿ ಇತರರಿದ್ದರು.

## ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್



ಚನ್ನರಾಯಪಟ್ಟಣ: ಆರೋಗ್ಯಕರ ಬದುಕಿಗೆ ಎಲ್ಲ ವ್ಯವಸ್ಥೆ ಮಾಡಿಕೊಟ್ಟಿರುವ ಪರಿಸರ ಸಂರಕ್ಷಣೆ ಮನುಷ್ಯನ ಆದ್ಯ ಕರ್ತವ್ಯವಾಗಬೇಕು ಎಂದು ಜನ ಜಾಗೃತಿ ವೇದಿಕೆ ಅಧ್ಯಕ್ಷ ಬೆಕ್ಕ ರಾಘವೇಂದ್ರ ಹೇಳಿದರು.

ತಾಲ್ಲೂಕಿನ ಹೆಚ್.ಚಿಕ್ಕೋನಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪಾಠ ಶಾಲೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಪರಿಸರ ಮಾಹಿತಿ ಕಾರ್ಯಕ್ರಮದಲ್ಲಿ ಮಾತನಾಡಿ, ತಮಗಿಷ್ಟ ಬಂದಂತೆ ಬದುಕುವ ಭರದಲ್ಲಿ ಪರಿಸರದ ಮೇಲೆ ದಾಳಿ ಮಾಡುವ ಮೂಲಕ ಪಕೃತಿಯನ್ನು ಕಡೆಗಣಿಸುತ್ತಿದ್ದೇವೆ. ಸಮತೋಲನ ಕಳೆದುಕೊಂಡಿರುವ ಪ್ರಕೃತಿಯು ವಿಕೋಪಗೊಂಡಿದ್ದು ಪ್ರವಾಹ, ಬರ ಸೇರಿದಂತೆ ವಿವಿಧ ಸಂಕಷ್ಟಗಳನ್ನು ಎದುರಿಸುತ್ತಿದ್ದೇವೆ ಎಂದರು.

ಪರಿಸರದಲ್ಲಿ ಬೆಳೆದಿರುವ ಹಾಗೂ ಕಾಣಸಿಗುವ ಪ್ರತಿಯೊಂದು ಸಸ್ಯಗಳಲ್ಲಿಯೂ ಔಷಧ ಗುಣವಿದೆ. ಕೃಷಿ ಚಟುವಟಿಕೆ, ನಗರೀಕರಣ ಹಾಗೂ ಇನ್ನಿತರ ಕಾರಣಗಳಿಂದ ಹಂತ ಹಂತವಾಗಿ ಎಲ್ಲವನ್ನು ನಾಶ ಪಡಿಸುತ್ತಿದ್ದು ಆರೋಗ್ಯ ಕೆಟ್ಟಲ್ಲಿ ಇಂಗ್ಲಿಷ್ ಮೆಡಿಷನ್ ಬಳಸುತ್ತೇವೆ. ಪರಿಸರ ಉತ್ತಮವಾಗಿದ್ದರೆ ಆರೋಗ್ಯ ವೃದ್ಧಿಯಾಗಲಿದೆ ಎಂದು ತಿಳಿಸಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಯೋಜನಾಧಿಕಾರಿ ಪುರಂದರ್ ಮಾತನಾಡಿ, ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ನೀಡುವುದಷ್ಟೇ ಅಲ್ಲದೇ ಹತ್ತು ಹಲವು ಯೋಜನೆಗಳನ್ನು ರೂಪಿಸಿ ಗ್ರಾಮೀಣ ಭಾಗದ ಸರ್ವತೋಮುಖ ಅಭಿವೃದ್ಧಿಗೆ ಕೆಲಸ ಮಾಡಲಾಗುತ್ತಿದೆ ಎಂದರು.

1982ರಲ್ಲಿ ಪ್ರಾರಂಭಗೊಂಡಿರುವ ಯೋಜನೆಯು ರಾಜ್ಯದೆಲ್ಲೆಡೆ ವಿಸ್ತಾರಗೊಂಡಿದ್ದು ಶೇ. 14 ರಷ್ಟು ಬಡ್ಡಿ ರೂಪದಲ್ಲಿ ಬ್ಯಾಂಕ್ ಸಹಕಾರದೊಂದಿಗೆ ಹಂತ ಹಂತವಾಗಿ ಹೆಚ್ಚಿನ ಸಾಲ ಸೌಲಭ್ಯ ಕಲ್ಪಿಸುವ ಮೂಲಕ ಸಂಕಷ್ಟದಲ್ಲಿರುವ ಜನತೆಗೆ ನೆರವಾಗಿ ನಿಂತಿದೆ ಎಂದು ತಿಳಿಸಿದರು.

ಶ್ರವಣಬೆಳಗೊಳ ರೈತ ಸಂಪರ್ಕ ಕೇಂದ್ರದ ತಾಂತ್ರಿಕ ಅಧಿಕಾರಿ ಅರ್ಪಿತ ಮಾತನಾಡಿ, ರೈತರು ವರ್ಷಕ್ಕೊಮ್ಮೆ ತಮ್ಮ ಕೃಷಿ ಜಮೀನಿನ ಮಣ್ಣನ್ನು ಪರೀಕ್ಷೆಗೆ ಒಳಪಡಿಸಿ ಫಲಿತಾಂಶದ ಆಧಾರದ ಮೇಲೆ ಕೃಷಿ ಅಧಿಕಾರಿಗಳ ಮಾರ್ಗದರ್ಶನದಂತೆ ಬೆಳೆಗಳಿಗೆ ಗೊಬ್ಬರ ನೀಡುವ ವ್ಯವಸ್ಥೆ ಮಾಡಿಕೊಳ್ಳಬೇಕು. ಜತೆಗೆ ಒಂದೇ ಬೆಳೆಯನ್ನು ಪದೇ ಪದೆ ಬೆಳೆಯುವ ರೂಢಿ ಕೈಬಿಟ್ಟು ಬೇರೆ ಬೇರೆ ಬೆಳೆಗಳನ್ನು ಬೆಳೆಯುವ ಪದ್ಧತಿ ಅನುಸರಿಸಬೇಕು. ಇದರಿಂದ ಉತ್ತಮ ಫಸಲಿನೊಂದಿಗೆ ಹೆಚ್ಚಿನ ಲಾಭ ಪಡೆಯಬಹುದು ಎಂದು ಮಾಹಿತಿ ನೀಡಿದರು.

ಯೋಜನೆ ವತಿಯಿಂದ ಶಾಲಾ ಆವರಣದಲ್ಲಿ ವಿವಿಧ ಬಗೆಯ ಔಷಧಿಯ ಗಿಡಗಳನ್ನು ನೆಡುವುದರ ಜತೆಗೆ ಪರಿಸರ ಅಭಿವೃದ್ಧಿಯ ಬಗ್ಗೆ ಮಾಹಿತಿ ನೀಡಲಾಯಿತು. ವಲಯದ ಮೇಲ್ವಿಚಾರಕ ಪರಮೇಶ್, ಒಕ್ಕೂಟದ ಅಧ್ಯಕ್ಷೆ ನಳಿನಮ್ಮ, ಯೋಜನೆಯ ಕೃಷಿ ಅಧಿಕಾರಿ ಮಹದೇವ ಪ್ರಸಾದ್, ಸೇವಾ ಪ್ರತಿನಿಧಿ ಆಶಾ, ಶಾಲಾ ಮುಖ್ಯಶಿಕ್ಷಕ ಎಂ.ಆರ್. ಚಲುವರಾಯಸ್ವಾಮಿ, ಸಹಶಿಕ್ಷಕ ಕೆ.ಮೋಹನ್ ಹಾಗೂ ಇನ್ನಿತರರು ಇದ್ದರು.

## ತೆಂಗಿನ ಮರ ಏರಿ ರೈತನ ಪ್ರತಿಭಟನೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ತೆಂಗಿನ ಮರ ತೆರವುಗೊಳಿಸಿ ಸೂಕ್ತ ಪರಿಹಾರ ನೀಡದೆ ವಿದ್ಯುತ್ ಲೈನ್ ಎಳೆಯುತ್ತಿದ್ದಾರೆಂದು ಆರೋಪಿಸಿ ತಾಲ್ಲೂಕಿನ ಹಿರೇಕಡಲೂರು ಗ್ರಾಮದ ರೈತನೊಬ್ಬ ಗುರುವಾರ ತೆಂಗಿನ ಮರ ಏರಿ ಪ್ರತಿಭಟನೆ ನಡೆಸಿದರು.

ಸೆಸ್ಕ್ ಅಧಿಕಾರಿಗಳು ನಿಗದಿಯಂತೆ ಪರಿಹಾರ ನೀಡದೆ 220 ಕೆವಿ ವಿದ್ಯುತ್ ಲೈನ್ ಎಳೆಯುತ್ತಿದ್ದಾರೆ. ಕಾಮಗಾರಿಗಾಗಿ 20ಕ್ಕೂ ಹೆಚ್ಚು ತೆಂಗಿನ ಮರ ತೆರವುಗೊಳಿಸುತ್ತಿದ್ದಾರೆ. ಮೊದಲು ಪರಿಹಾರ ನೀಡಿ ಜಮೀನು ಸರ್ವೆ ಮಾಡುವಂತೆ ರೈತ ರಂಗಸ್ವಾಮಿ ಒತ್ತಾಯಿಸಿದರು.

ರೈತ ತೆಂಗಿನ ಮರ ಏರಿ ಕುಳಿತ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಗ್ರಾಮಾಂತರ ಠಾಣೆ ಪೊಲೀಸರು ಮನವೊಲಿಸಿ ಕೆಳಗಿಳಿಸಿದರು. ಈ ವೇಳೆ ಗ್ರಾಮಸ್ಥರು ಹಾಗೂ ಪೊಲೀಸರ ನಡುವೆ ವಾಗ್ವಾದ ನಡೆಯಿತು.

## ನಗರದಲ್ಲಿ ಪುಡಿ ರೌಡಿಗಳ ಪುಂಡಾಟ



ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ನಗರದ ಸರಸ್ವತಿ ಪುರಂನಲ್ಲಿ ಚಲಿಸುತ್ತಿದ್ದ ಕಾರಿಗೆ ದಿಢೀರನೆ ಎದುರಾದ ಪುಡಿ ರೌಡಿಗಳು ಚಾಲಕನ ಮೇಲೆ ಹಲ್ಲೆಗೆ ಯತ್ನಿಸಿರುವ ಘಟನೆ ಗುರುವಾರ ಬೆಳಿಗ್ಗೆ 4.30ರ ಸಮಯದಲ್ಲಿ ನಡೆದಿದೆ.

ಪುನೀತ್ ಎಂಬುವರ ಕಾರಿಗೆ ಎದುರುಗಡೆಯಿಂದ ಬೈಕ್‌ನಲ್ಲಿ ಬಂದ ಮೂವರು ಅಡ್ಡಗಟ್ಟಿ ನಿಲ್ಲಿಸಿದ್ದಾರೆ. ತಕ್ಷಣವೇ ಕೆಳಗಿಳಿದು ಕಾರು ಚಾಲಕ ಪುನೀತ್ ಮೇಲೆ ಹಲ್ಲೆಗೆ ಯತ್ನಿಸಿದ್ದಾರೆ. ಕಲ್ಲಿನಿಂದ ಕಾರಿನ ಗಾಜು ಒಡೆದು ಹಾಕಿದ್ದಾರೆ. ಅಪಾಯದ ಮುನ್ಸೂಚನೆ ಅರಿತ ಪುನೀತ್ ಜೋರಾಗಿ ವಾಹನ ಓಡಿಸಿಕೊಂಡು ಹೋಗಿದ್ದಾರೆ. ನಂತರ ಮೂವರು ಬೈಕ್ ತಿರುಗಿಸಿಕೊಂಡು ಕಾರು ಬೆನ್ನಟ್ಟಿರುವ ದುಂಡಾವರ್ತನೆಯ ವಿಡಿಯೋ ರಸ್ತೆಯ ಮನೆಯೊಂದರ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಪೆನ್ಷನ್ ಮೊಹಲ್ಲಾ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

## ವಿಮೆ ಪಾವತಿಗೆ ಜು. 15ರ ವರೆಗೆ ಅವಧಿ ವಿಸ್ತರಣೆ

ಸಕಲೇಶಪುರ: ಬೆಳೆ ವಿಮೆ ಪಾವತಿಗೆ ಅವಧಿ ವಿಸ್ತರಿಸಬೇಕೆಂಬ ಶಾಸಕ ಸಿಮೆಂಟ್ ಮಂಜು ಅವರ ಮನವಿಗೆ ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರು ಸ್ಪಂದಿಸಿದ್ದು, ಜು. 15ರ ವರೆಗೆ ಕಾಲಾವಕಾಶ ನೀಡಲಾಗಿದೆ.

ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ (ಗಆಇಐಖ) ಅನುಷ್ಠಾನ ಸಂಬಂಧ 2024-25ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮಿಗೆ ಜಿಲ್ಲಾ ಕ್ಲಸ್ಟರ್‌ವಾರು ವಿಮೆ ಸಂಸ್ಥೆಗಳು ಸಮಯ ನಿಗದಿಪಡಿಸಿದ್ದವು. ಆದರೆ ವಿಮೆ ಕಂತು ಕಟ್ಟಲು ತಾಂತ್ರಿಕ ಹಾಗು ಇನ್ನಿತರ ಸಮಸ್ಯೆ ಎದುರಾಗಿತ್ತು. ಅಡಿಕೆ, ಮೆಣಸು, ದಾಳಿಂಬೆ, ಬೀಟಲ್‌ವೈನ್, ಪಪ್ಪಾಯಿ ಮತ್ತು ಆಮ್ಲ ನಿಂಬೆ ಬೆಳೆಗಳಿಗೆ ಕಟ್-ಆಫ್ ದಿನಾಂಕ ವಿಸ್ತರಣೆಯನ್ನು ಉಲ್ಲೇಖಿಸಲಾಗಿದೆ. ಈ ಕುರಿತಂತೆ ಪರಿಶೀಲನೆ ನಡೆಸಿದ ಸಚಿವರು ವಿಮೆ ಪಾವತಿಗೆ ಜು. 15ರ ವರೆಗೆ ಸಮಯ ಕಲ್ಪಿಸಿದ್ದಾರೆ.

## ಸಾವಯವ ಕೃಷಿಯಿಂದ ಬದುಕು ಹಸನು



ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಚನ್ನರಾಯಪಟ್ಟಣ: ಯಾವುದೋ ಒಂದೇ ಬೆಳೆಗೆ ಸೀಮಿತವಾಗದೆ ಸಾವಯವ ಹಾಗೂ ಸಮಗ್ರ ಕೃಷಿ ಪದ್ಧತಿ ಅನುಸರಿಸಿದರೆ ರೈತರ ಬದುಕು ಹಸನಾಗಲಿದೆ ಎಂದು ಯುವ ರೈತ ಹೆಚ್.ಕೆ. ಗೋವಿಂದರಾಜ್ ಹೇಳಿದರು.

ತಾಲ್ಲೂಕಿನ ಸೋಸಲಗೆರೆ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ರೈತ ಕ್ಷೇತ್ರ ಪಾಠಶಾಲೆ ಕಾರ್ಯಕ್ರಮದಲ್ಲಿ ಮಾತನಾಡಿ, ಸಾವಯವ ಕೃಷಿಯಿಂದ ಆದಾಯದ ಜತೆಗೆ ಆರೋಗ್ಯವೂ ವೃದ್ಧಿಯಾಗಲಿದೆ ಎಂದರು.

ಕೊಳವೆ ಬಾವಿಯಲ್ಲಿ ಸಾಕಷ್ಟು ನೀರು ಸಿಗುತ್ತದೆಂದು ಬೆಳೆಗಳಿಗೆ ಹೇರಳವಾಗಿ ನೀರಾಯಿಸಬಾರದು. ಬದಲಿಗೆ ಹನಿ ನೀರಾವರಿ ಇಲ್ಲವೇ ತುಂತುರು ನೀರಾವರಿ ಪದ್ಧತಿ ಅನುಸರಿವುದು ಒಳ್ಳೆಯದು. ಇದರಿಂದ ನೀರನ್ನು ಉಳಿಸುವುದರ ಜತೆಗೆ ಹೆಚ್ಚಿನ ಬೆಳೆಗಳಿಗೆ ನೀರಾಯಿಸಬಹುದು. ಅಲ್ಲದೆ ಉತ್ತಮ ಫಸಲು ತೆಗೆಯಬಹುದು ಎಂದು ತಿಳಿಸಿದರು.

ರಾಸಾಯನಿಕ ಗೊಬ್ಬರ ಬಳಕೆಯಿಂದ ಮಣ್ಣಿನ ಆರೋಗ್ಯ ಕೆಡುತಿದ್ದು ಮನುಷ್ಯನ ಆರೋಗ್ಯವೂ ಸಹ ಹದಗೆಡುತ್ತಿದೆ. ಕೃಷಿ ಚಟುವಟಿಕೆಯಲ್ಲಿ ದಿನದಿಂದ ದಿನಕ್ಕೆ ರಾಸಾಯನಿಕ ಗೊಬ್ಬರದ ಬಳಕೆಯನ್ನು ಕಡಿಮೆ ಮಾಡಿಕೊಂಡು ಕೊಟ್ಟಿಗೆ ಗೊಬ್ಬರ ಉಪಯೋಗಿಸಿದ್ದಲ್ಲಿ ಪೌಷ್ಟಿಕ ಆಹಾರ ಪದಾರ್ಥಗಳನ್ನು ಬೆಳೆಯಬಹುದು. ಇದರಿಂದ ಸಮಾಜದ ಆರೋಗ್ಯವನ್ನು ಕಾಪಾಡಬಹದು ಎಂದು ಸಲಹೆ ನೀಡಿದರು.

ಆಧುನಿಕ ಯಂತ್ರೋಪಕರಣಗಳು ಪರಿಚಯವಾದ ಮೇಲೆ ಮೂಲ ಕೃಷಿ ಪದ್ಧತಿ ಕಣ್ಮರೆಗೆ ಸರಿದಿದ್ದು, ನಾಟಿ ಜಾನುವಾರುಗಳ ಸಂತತಿ ಕ್ಷೀಣಿಸುತ್ತಿದೆ. ಅಲ್ಲದೆ ಕೃಷಿಯಲ್ಲಿ ತೊಡಗಿ ಬೆವರು ಸುರಿಸಿ ಶ್ರಮಿಸದ ಕಾರಣ ಇನ್ನಿಲ್ಲದ ಕಾಯಿಲೆಗಳಿಗೆ ಮನುಷ್ಯ ತುತ್ತಾಗುತಿದ್ದಾನೆ ಎಂದು ಆತಂಕ ವ್ಯಕ್ತಪಡಿಸಿದರು.

ಸಾವಯವ ಕೃಷಿಕ ಅಣ್ಣಯ್ಯಪ್ಪ ಅವರು ಸಾವಯವ, ಸಮಗ್ರ, ಕಾಡು ಕೃಷಿ ಸೇರಿದಂತೆ ಪರಿಸರ ಸಂರಕ್ಷಣೆಯ ಬಗ್ಗೆ ಮಾಹಿತಿ ನೀಡಿ ಅರಿವು ಮೂಡಿಸಿದರು. ತಾಲೂಕು ಕೃಷಿ ಮೇಲ್ವಿಚಾರಕ ದಿನೇಶ್, ವಲಯದ ಮೇಲ್ವಿಚಾರಕ ಹರೀಶ್, ಸೇವಾ ಪ್ರತಿನಿಧಿ ಕಾವ್ಯ ಇತರರಿದ್ದರು.

# 49 ವರ್ಷದ ಹೇಮಾವತಿ ಜಲಾಶಯಕ್ಕೆ 33 ಬಾರಿ ಭರ್ತಿ ಭಾಗ್ಯ

## ಪ್ರವಾಸೋದ್ಯಮ ಚೇತರಿಕೆ : 16 ಸಲ ಭರ್ತಿಯಾಗಿಲ್ಲ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲೆಯ ಜೀವನಾಡಿ ತಾಲ್ಲೂಕಿನ ಗೊರೂರಿನಲ್ಲಿರುವ ಹೇಮಾವತಿ ಜಲಾಶಯ 49 ವರ್ಷಗಳಲ್ಲಿ 33 ವರ್ಷ ಪೂರ್ಣ ಭರ್ತಿಯಾಗಿ ಕೃಷಿಗೆ ವರದಾನವಾಗಿದೆ ಮಾತ್ರವಲ್ಲದೆ ಪ್ರವಾಸೋದ್ಯಮ ದೃಷ್ಟಿಯಿಂದಲೂ ಜಿಲ್ಲೆಗೆ ನೆರವಾಗಿದೆ.



1976ರಲ್ಲಿ ನಿರ್ಮಿಸಲಾದ ಜಲಾಶಯಕ್ಕೆ ತನ್ನದೇಯಾದ ಇತಿಹಾಸವಿದೆ. ಹೇಮಾವತಿ ಅಣೆಕಟ್ಟೆಯ ನೀರು ಸಂಗ್ರಹ ಸಾಮರ್ಥ್ಯ 37.10 ಟಿಎಂಸಿ. ಅಣೆಕಟ್ಟೆಯ ಎತ್ತರ 44.5 ಮೀಟರ್ (146 ಅಡಿ), ಉದ್ದ 4962 ಮೀಟರ್. ಒಟ್ಟು 7,89,520 ಎಕರೆಗೆ ನೀರಾವರಿ ಸೌಲಭ್ಯ ಒದಗಿಸುತ್ತಿದೆ. ಈ ಪೈಕಿ ಜಿಲ್ಲೆಯ 1,55,030 ಎಕರೆ, ತುಮಕೂರು ಜಿಲ್ಲೆಯ 3,17,672 ಎಕರೆ, ಮಂಡ್ಯ ಜಿಲ್ಲೆಯ 2,30,885 ಎಕರೆ ಮತ್ತು ಮೈಸೂರು ಜಿಲ್ಲೆಯ 5,665 ಎಕರೆಗೆ ನೀರಾವರಿ ಸೌಲಭ್ಯ ಒದಗಿಸುತ್ತದೆ. ನೀರಾವರಿ ಕ್ಷೇತ್ರದ ಜೊತೆಗೆ ಗೊರೂರು ಜಲಾಶಯ ಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾಗಿದೆ.

ಹೇಮೆ ಭರ್ತಿಯಾದ ವರ್ಷ: ಹೇಮಾವತಿ ಜಲಾಶಯ ಇಲ್ಲಿವರೆಗೆ 33 ವರ್ಷ ಸಂಪೂರ್ಣ ಭರ್ತಿಯಾಗಿ ದಾಖಲೆ ಬರೆದಿದೆ. ಪಶ್ಚಿಮ ಘಟ್ಟ ಭಾಗದಲ್ಲಿ ನಿರಂತರವಾಗಿ ಮಳೆ ಸುರಿಯುವ ಹಿನ್ನಲೆ ಜಲಾಶಯಕ್ಕೆ ನೀರಿನ ಕೊರತೆಯಾಗಿಲ್ಲ. ಭೀಕರ ಬರ ಆವರಿಸಿದ ಸಂದರ್ಭದಲ್ಲಿ ಮಾತ್ರ ಹೇಮಾವತಿ ಬರಿದಾಗಿರುವುದನ್ನು ಕಾಣಬಹುದು. 1983ರ ನವೆಂಬರ್ 7 ರಂದು 35.508 ಟಿಎಂಸಿ ನೀರು ಸಂಗ್ರಹ ಮೂಲಕ ಹೇಮಾವತಿ ಜಲಾಶಯ ಮೊದಲ ಬಾರಿಗೆ ಭರ್ತಿಯಾಯಿತು. 1984ರಲ್ಲೂ 35.189 ಟಿಎಂಸಿ ಮೂಲಕ ಮತ್ತೊಮ್ಮೆ ತುಂಬಿತ್ತು. 1986ರಲ್ಲಿ 35.030 ಟಿಎಂಸಿ, 1988 ರಿಂದ 1991ರ ವರೆಗೆ ಸತತವಾಗಿ 37.103 ಟಿಎಂಸಿ ವರೆಗೆ ನೀರು ಸಂಗ್ರಹವಾಗಿತ್ತು. 1992ರಲ್ಲಿ 36.948 ಟಿಎಂಸಿ, 1993ರಲ್ಲಿ 34.632 ಟಿಎಂಸಿ, 1994ರಲ್ಲಿ 36.639 ಟಿಎಂಸಿ, 1995ರಲ್ಲಿ 37.103 ಟಿಎಂಸಿ, 1997ರಲ್ಲಿ 36.194 ಟಿಎಂಸಿ, 1998ರಲ್ಲಿ 36.358, 1999ರಲ್ಲಿ 35.459 ಟಿಎಂಸಿ, 2000ನೇ ಇಸ್ವಿಯಲ್ಲಿ 36.929 ಟಿಎಂಸಿ, 2001ರಲ್ಲಿ 30.8999 ಟಿಎಂಸಿ ನೀರು ಸಂಗ್ರಹವಾಗಿತ್ತು. ನಂತರದ ಎರಡು ವರ್ಷ ಬರ ಆವರಿಸಿದ ಹಿನ್ನೆಲೆಯಲ್ಲಿ ಮತ್ತೆ 2004ರಲ್ಲಿ ಭರ್ತಿಯಾಗಿತ್ತು.

2004ರಲ್ಲಿ 33.500 ಟಿಎಂಸಿ., 2005ರ ಒಂದೇ ವರ್ಷದಲ್ಲಿ ಆಗಸ್ಟ್ ಮತ್ತು ನವೆಂಬರ್ ಸೇರಿ ಎರಡು ಬಾರಿ 37.103 ಟಿಎಂಸಿ ನೀರು ಶೇಖರಣೆಯಾಗಿತ್ತು. 2006ರಲ್ಲಿ 36.861 ಟಿಎಂಸಿ ಸಂಗ್ರಹವಾಗಿತ್ತು. ನಂತರ 2007 ರಿಂದ 2011ರ ವರೆಗೆ 37.103 ಟಿಎಂಸಿ ನೀರು ಸಂಗ್ರಹ ಮೂಲಕ ಪ್ರತಿವರ್ಷ ಭರ್ತಿಯಾಗಿತ್ತು. 2013ರಲ್ಲಿ 36.14 ಹಾಗು 14ರಲ್ಲಿ 37.103 ಟಿಎಂಸಿ ನೀರು ಸಂಗ್ರಹವಾಗಿತ್ತು. ಪುನಃ 2018ರಲ್ಲಿ 35.314 ಟಿಎಂಸಿ, ನಂತರದ ವರ್ಷ 37.10 ಟಿಎಂಸಿ, 2020ರಲ್ಲಿ 36.70, 2021ರಲ್ಲಿ 35.59 ಟಿಎಂಸಿ, 2022ರಲ್ಲಿ 37.10 ಟಿಎಂಸಿ ನೀರು ಸಂಗ್ರಹವಾಗಿದೆ. 2024ನೇ ಸಾಲಿನಲ್ಲಿಯೂ ಅಣೆಕಟ್ಟೆ ಭರ್ತಿಯಾಗಿದೆ. ಪ್ರಸಕ್ತ 2025ರಲ್ಲಿ ಮೂಡಿಗೆರೆ ಹಾಗು ಕೊಡಗು ಭಾಗದಲ್ಲಿ ವ್ಯಾಪಕ ಮಳೆ ಸುರಿದ ಪರಿಣಾಮ ಒಳಹರಿವು ಹೆಚ್ಚಾಗಿ 6 ಕ್ರಸ್ಟ್ ಗೇಟ್‌ಗಳ ಮೂಲಕ ನೀರು ಹೊರಬಿಡಲಾಗಿದೆ. ಜಲಾಶಯ ಭರ್ತಿಗೆ 5.99 ಅಡಿ ಬಾಕಿ ಇದೆ. ಆದರೆ ಹೆಚ್ಚಿನ ಒಳಹರಿವು ನಿರೀಕ್ಷೆ ಮತ್ತು ಜಲಾಶಯ ಭದ್ರತೆ ದೃಷ್ಟಿಯಿಂದ ನದಿಗೆ ನೀರು ಹರಿಸಲಾಗುತ್ತಿದೆ.

ಹೇಮಾವತಿ ಭರ್ತಿಯಾಗದ ವರ್ಷಗಳು: 1977 ರಲ್ಲಿ 11.934 ಟಿಎಂಸಿ., 1978ರಲ್ಲಿ 19.683 ಟಿಎಂಸಿ, 1979ರಲ್ಲಿ 20.681 ಟಿಎಂಸಿ, 1980ರಲ್ಲಿ 26.87 ಟಿಎಂಸಿ, 1981ರಲ್ಲಿ 27.98 ಟಿಎಂಸಿ, 1982ರಲ್ಲಿ 27.27 ಟಿಎಂಸಿ, 1985ರಲ್ಲಿ 24.496 ಟಿಎಂಸಿ, 1987ರಲ್ಲಿ 23.283 ಟಿಎಂಸಿ, 1996 ರಲ್ಲಿ 28.433 ಟಿಎಂಸಿ, 2002ರಲ್ಲಿ 21.640 ಟಿಎಂಸಿ, 2003ರಲ್ಲಿ 12.240 ಟಿಎಂಸಿ, 2012ರಲ್ಲಿ 32.826 ಟಿಎಂಸಿ, 2015ರಲ್ಲಿ 29.155 ಟಿಎಂಸಿ, 2016ರಲ್ಲಿ 21.551 ಟಿಎಂಸಿ, 2017ರಲ್ಲಿ 17.852 ಟಿಎಂಸಿ ಹಾಗು 2023ರಲ್ಲಿ 31.715 ಟಿಎಂಸಿ ಮಾತ್ರ ಸಂಗ್ರಹವಾಗಿತ್ತು.

ಹೇಮಾವತಿ ಜಲಾಶಯ ಪ್ರಮುಖವಾಗಿ ಐದು ನಾಲೆಗಳನ್ನು ಒಳಗೊಂಡಿದೆ. ಹೇಮಾವತಿ ಎಡದಂಡೆ ನಾಲೆ 212 ಕಿ.ಮೀ. ಉದ್ದ ವ್ಯಾಪ್ತಿ ಹೊಂದಿದೆ. ನಾಗಮಂಗಲ ಶಾಖಾ ನಾಲೆ 78 ಕಿ.ಮೀ., ತುಮಕೂರು ಶಾಖಾ ನಾಲೆ 240 ಕಿ.ಮೀ., ಹೇಮಾವತಿ ಬಲದಂಡೆ ನಾಲೆ 91 ಕಿ.ಮೀ., ಹೇಮಾವತಿ ಬಲಮೇಲ್ದಂಡೆ ನಾಲೆ 97 ಕಿ.ಮೀ. ಉದ್ದದ ವ್ಯಾಪ್ತಿಯನ್ನು ಒಳಗೊಂಡಿದೆ. ಹೇಮಾವತಿ ಜಲಾಶಯದ ಒಟ್ಟು ಮುಳುಗಡೆ ಪ್ರದೇಶ 21008 ಎಕರೆ ಇದ್ದು, 46 ಹಳ್ಳಿಗಳನ್ನು ಪೂರ್ಣ ಮುಳುಗಡೆ ಎಂದು ಪರಿಗಣಿಸಲಾಗಿದೆ.

### ದೃಶ್ಯ ಕಾವ್ಯ ಸೋಜಿಗ

ಹೇಮಾವತಿ ಜಲಾಶಯ ನೀರಾವರಿ ಸೌಲಭ್ಯದ ಮೂಲಕ ರೈತರಿಗೆ ವರದಾನವಾಗಿದೆ ಮಾತ್ರವಲ್ಲದೆ ಪ್ರವಾಸೋದ್ಯಮ ದೃಷ್ಟಿಯಿಂದಲೂ ವರ್ಷದಿಂದ ವರ್ಷಕ್ಕೆ ಜನಾಕರ್ಷಣೆಯ ಕೇಂದ್ರಬಿಂದುವಾಗಿದೆ. ಕ್ರಸ್ಟ್ ಗೇಟ್‌ಗಳ ಮೂಲಕ ನೀರು ಹರಿಬಿಟ್ಟಾಗ ಉಂಟಾಗುವ ದೃಶ್ಯ ಕಾವ್ಯ ನೋಡುವುದೇ ಸೋಜಿಗ. ನವ ಜೋಡಿಗಳು, ಮಕ್ಕಳು, ಫೋಟೊ ಕ್ಲಿಕ್ಕಿಸಿಕೊಳ್ಳುತ್ತಾ ಆನಂದಪಡುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಮುಖ್ಯ ರಸ್ತೆಯಲ್ಲಿ ಕ್ಯಾಂಟೀನ್‌ಗಳು ತಲೆ ಎತ್ತಿದ್ದು ಭರ್ಜರಿ ವ್ಯಾಪಾರವು ಆಗುತ್ತಿದೆ.



## ಶಾಲಾ-ಕಾಲೇಜುಗಳಲ್ಲಿ ಆರೋಗ್ಯ ಅರಿವು : ಡಾ. ಪುಷ್ಪಲತಾ



ಅರಕಲಗೂಡು: ಹೃದಯಾಘಾತ ಮತ್ತು ಸಾಂಕ್ರಾಮಿಕ ರೋಗಗಳ ಬಗ್ಗೆ ತಾಲ್ಲೂಕು ಆರೋಗ್ಯ ಇಲಾಖೆ ವತಿಯಿಂದ ಶಾಲಾ ಕಾಲೇಜು ಹಾಗೂ ಸಾರ್ವಜನಿಕರಿಗೆ ಆರೋಗ್ಯ ಶಿಕ್ಷಣ ಹಾಗೂ ಮುನ್ನೆಚ್ಚರಿಕೆ ವಹಿಸುವ ಕುರಿತು ತಿಳವಳಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಪುಷ್ಪಲತಾ ತಿಳಿಸಿದರು.

ತಾಲ್ಲೂಕಿನ ಬೈಚನಹಳ್ಳಿ ಗ್ರಾಮಾಂತರ ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಆರೋಗ್ಯ ಅರಿವು ಕಾರ್ಯಕ್ರಮ ಕುರಿತು ಮಾತನಾಡಿದ ಅವರು, ಜಿಲ್ಲೆಯಲ್ಲಿ ಇತ್ತೀಚೆಗೆ ಕಂಡುಬರುತ್ತಿರುವ ಹೃದಯಾಘಾತ ಪ್ರಕರಣಗಳ ಬಗ್ಗೆ ಸಾರ್ವಜನಿಕರು ಭಯವನ್ನು ಹೊಂದದೆ ನಿತ್ಯದ ಬದುಕಿನಲ್ಲಿ ಒತ್ತಡವನ್ನು ಇಟ್ಟುಕೊಳ್ಳಬಾರದು. ಆರೋಗ್ಯಯುತ ಆಹಾರ ಸೇವನೆ, ಸಕ್ಕರೆ, ಮೈದಾದಿಂದ ಸಿದ್ಧಗೊಂಡ ಆಹಾರ ಸೇವನೆ ಬಗ್ಗೆ ಎಚ್ಚರಿಕೆ ಇರಬೇಕು. ವ್ಯಾಯಾಮ, ವಾಕ್ ಮಾಡುವ ಜತೆಗೆ ಕಡ್ಡಾಯವಾಗಿ ರಸ್ತೆ ಬದಿ ದೊರೆಯುವ ಜಂಕ್ ಫುಡ್ ಸೇವಿಸುವುದನ್ನು ನಿಲ್ಲಿಸಬೇಕೆಂದರು.

ಈಗಾಗಲೇ ಸಕ್ಕರೆ ಕಾಯಿಲೆ, ಅಧಿಕ ರಕ್ತದ ಒತ್ತಡ ಹೊಂದಿರುವವರು ಕಡ್ಡಾಯವಾಗಿ ಇಸಿಜಿ, ಎಕೋ ತಪಾಸಣೆಗೆ ಒಮ್ಮೆ ಒಳಗಾಗುವುದು ಅತ್ಯವಶ್ಯಕವಾಗಿದೆ. ದೇಹದಲ್ಲಿ ಕಂಡುಬರುವ ನಾನಾ ಸಮಸ್ಯೆಗಳನ್ನು ಯಾವುದೇ ಕಾರಣಕ್ಕೂ ನಿರ್ಲಕ್ಷಿಸಬೇಡಿ. ತಜ್ಞರು ಹೇಳುವಂತೆ ಯುವ ಸಮುದಾಯದವರು ಮೊಬೈಲ್ ಬಳಕೆಯಿಂದ ಹೆಚ್ಚು ಅನಾರೋಗ್ಯಕ್ಕೆ ತುತ್ತಾಗುವ ಆತಂಕವಿರುವ ಬಗ್ಗೆ ಮಾಹಿತಿ ನೀಡುತ್ತಿದ್ದಾರೆ. ಈ ಬಗ್ಗೆ ಪೋಷಕರು ತಮ್ಮ ಮಕ್ಕಳಿಗೆ ತಿಳವಳಿಕೆ ಹೇಳಬೇಕಿದೆ. ಅತಿಯಾದ ಮೊಬೈಲ್ ಬಳಕೆ ಕೂಡ ಹೃದಯಸ್ತಂಭನಕ್ಕೆ ಕಾರಣವಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ ಎಂಬ ವರದಿಗಳು ಲಭ್ಯವಾಗುತ್ತಿವೆ ಎಂದು ಹೇಳಿದರು.

ಈ ಹಿಂದೆ ತಾಲ್ಲೂಕಿನಲ್ಲಿ ಕೂಡ ಇಬ್ಬರು ಹೃದಯಾಘಾತಕ್ಕೆ ಒಳಗಾಗಿರುವ ಬಗ್ಗೆ ವರದಿಯಾಗಿದೆ. ಈ ಬಗ್ಗೆ ಮನೆಗಳಿಗೆ ತೆರಳಿ ತನಿಖೆ ಕೈಗೊಳ್ಳಲಾಗುತ್ತಿದೆ. ಅಲ್ಲದೆ ಆರೋಗ್ಯ ಇಲಾಖೆ ಅಧಿಕಾರಿಗಳನ್ನು ಒಳಗೊಂಡ ತಂಡ ರಚಿಸಿ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ಆರೋಗ್ಯದ ಅರಿವು ಮೂಡಿಸುವ ಕೆಲಸ ಕೈಗೊಳ್ಳಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಹಾಗೂ ಕಾಲೇಜಿನ ಉಪನ್ಯಾಸಕರು, ಶಿಕ್ಷಕರು ಇದ್ದರು.

# ಒತ್ತುವರಿ ತೆರವಿಗೆ ನಿರ್ಲಕ್ಷ್ಯ ಬೇಡ: ಶಾಸಕ ಸುರೇಶ್



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಸರ್ಕಾರಿ ಅಥವಾ ಸಾರ್ವಜನಿಕರ ಅನುಕೂಲಕ್ಕಾಗಿ ಮೀಸಲಿಟ್ಟ ಜಾಗವನ್ನು ಒತ್ತುವರಿ ಮಾಡಿದ್ದರೆ ಎಷ್ಟೇ ಬಲಾಢ್ಯರಾಗಿದ್ದರೂ ಹೆದರದೆ ತೆರವುಗೊಳಿಸಬೇಕು ಎಂದು ಶಾಸಕ ಹೆಚ್.ಕೆ. ಸುರೇಶ್ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದ ಯಗಚಿ ಸೇತುವೆ ಸಮೀಪದ ಸಮಾಜ ಕಲ್ಯಾಣ ಇಲಾಖೆ ವಸತಿ ನಿಲಯ ತಡೆಗೋಡೆಗೆ ಶಂಕುಸ್ಥಾಪನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಸಮಾಜ ಕಲ್ಯಾಣ ಇಲಾಖೆಯಿಂದ ಈ ಹಿಂದೆ ವಸತಿ ಗೃಹಗಳನ್ನು ನಿರ್ಮಿಸುವ ಸಂದರ್ಭದಲ್ಲಿ ಕೆಲ ಬಲಾಢ್ಯರು ಒತ್ತುವರಿಗೆ ಹುನ್ನಾರ ನಡೆಸಿದ್ದಾರೆಂಬ ಆರೋಪವಿತ್ತು. ಈ ಸಂದರ್ಭದಲ್ಲಿ ನಾವು ಸೂಕ್ತ ರೀತಿಯಲ್ಲಿ ಸರ್ವೆ ನಡೆಸಿ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ಆಸ್ತಿಯನ್ನು ಉಳಿಸಲಾಗಿದೆ. ಮುಂದಿನ ದಿನದಲ್ಲಿ ಒತ್ತುವರಿಯಾಗಬಾರದು ಮತ್ತು ಸರ್ಕಾರದ ಆಸ್ತಿ ಸಂರಕ್ಷಿಸಬೇಕು ಎಂಬ ನಿಟ್ಟಿನಲ್ಲಿ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಅವರು ಸದ್ಯ 60 ಲಕ್ಷ ರೂ. ತಡೆಗೋಡೆ ನಿರ್ಮಿಸಲು ನೀಡಿದ್ದಾರೆ. ಮುಂದಿನ ದಿನದಲ್ಲಿ 2 ಕೋಟಿ ರೂ.ಗೆ ಪ್ರಸ್ತಾವನೆ ಸಲ್ಲಿಸಿ ಸುಭದ್ರ ತಡೆಗೋಡೆ ನಿರ್ಮಿಸಲಾಗುತ್ತದೆ. ಈಗಾಗಲೇ ಸಮಾಜ ಕಲ್ಯಾಣ ಇಲಾಖೆಗೆ ಒಳಪಟ್ಟ ವಿಶಾಲವಾದ ಜಾಗದಲ್ಲಿ ವಿದ್ಯಾರ್ಥಿಗಳಿಗೆ ಪೂರಕವಾದ ಪರಿಸರ ನಿರ್ಮಾಣಕ್ಕೆ ಉದ್ಯಾನವನ ಮತ್ತು ವಾಯು ವಿಹಾರಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಕೆಲಸ ಮಾಡಲಾಗುತ್ತದೆ ಎಂದರು.

ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಕ್ಕೆ ಬರುವ ಬಹುತೇಕ ವಿದ್ಯಾರ್ಥಿಗಳು ಬಡವರು. ಅವರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಅಧಿಕಾರಿಗಳು ಪ್ರಾಮಾಣಿಕವಾಗಿ ನೀಡಲು ಮುಂದಾಗಿದೆ. ಕುಟುಂಬವನ್ನು ಬಿಟ್ಟು ಬಂದ ಮಕ್ಕಳಿಗೆ ಶುಚಿ-ರುಚಿಯುಕ್ತ ಆಹಾರವನ್ನು ನೀಡಬೇಕು. ಒಂದು ವೇಳೆ ಭೇಟಿ ನೀಡಿದ ಸಂದರ್ಭದಲ್ಲಿ ವಸತಿನಿಲಯದಲ್ಲಿ ಅವಘಡ ಕಂಡರೆ ಕ್ರಮಕೈಗೊಳ್ಳಲು ಮೀನಮೇಷ ಎಣಿಸುವುದಿಲ್ಲ ಎಂದ ಅವರು, ರಾಜ್ಯ ಸರ್ಕಾರದಿಂದ ಅನುದಾನ ತರುವುದು ಅಷ್ಟು ಸುಲಭದ ಕೆಲಸವಲ್ಲ, ಕಾಮಗಾರಿ ಗುಣಮಟ್ಟದಿಂದ ಕೂಡಿಸಬೇಕು ಮತ್ತು ಈ ಬಗ್ಗೆ ಅಧಿಕಾರಿಗಳು ಜಾಗೃತಿಯನ್ನು ವಹಿಸಬೇಕು ಎಂದು ತಿಳಿಸಿದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ವಸಂತಕುಮಾರ್, ದಲಿತ ಮುಖಂಡ ಮರಿಯಪ್ಪ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಪರ್ವತಯ್ಯ, ಮಾಜಿ ಸದಸ್ಯ ಚಿಕಬ್ಯಾಡಿಗೆರೆ ಮಂಜುನಾಥ್, ಪುರಸಭಾ ಮಾಜಿ ಸದಸ್ಯ ಮಂಜುನಾಥ್, ಬಿ.ಎಲ್.ಲಕ್ಷ್ಮಣ್, ಕುಮಾರಸ್ವಾಮಿ, ಸಮಾಜ ಕಲ್ಯಾಣ ಇಲಾಖೆ ವ್ಯವಸ್ಥಾಪಕ ಪ್ರಕಾಶ್, ಕೆಆರ್‌ಐಡಿ ಕಾರ್ಯಪಾಲಕ ಎಂಜಿನೀಯರ್ ಅಣ್ಣಯ್ಯ, ಸಹಾಯಕ ಎಂಜಿನೀಯರ್ ನವ್ಯಶ್ರೀ, ಕೀರ್ತನ್ ಕುಮಾರ್, ಹೆಬ್ಬಾಳು ಜಗದೀಶ್ ಮತ್ತಿತರರಿದ್ದರು.

## ಹೆಬ್ಬಾಲೆ ಪ್ರೌಢ ಶಾಲೆಯಲ್ಲಿ ಶಾಲಾ ಸಂಸತ್ ರಚನೆ

ಅರಕಲಗೂಡು: ತಾಲ್ಲೂಕಿನ ಹೆಬ್ಬಾಲೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢ ಶಾಲಾ ವಿಭಾಗದ 2025-26ನೇ ಸಾಲಿನ ಶಾಲಾ ಸಂಸತ್ ಮಂತ್ರಿಮಂಡಲ ಪದಗ್ರಹಣ ಪ್ರಮಾಣ ವಚನ ಸಮಾರಂಭ ನಡೆಯಿತು.

ಶಾಲೆಯ ಮುಖ್ಯ ಶಿಕ್ಷಕ ಬಿ.ಡಿ. ಶಂಕರೇಗೌಡ ಅವರು ನೂತನವಾಗಿ ಆಯ್ಕೆಯಾದ ಮಂತ್ರಿಮಂಡಲದ ಎಲ್ಲಾ ಸದಸ್ಯರಿಗೆ ಪ್ರತಿಜ್ಞಾ ವಿಧಿಯನ್ನು ಬೋಧಿಸಿದ ಬಳಿಕ



ಮಾತನಾಡಿ, ಭವಿಷ್ಯದ ಭವ್ಯ ಭಾರತದ ನಿರ್ಮಾಣದಲ್ಲಿ ವಿದ್ಯಾರ್ಥಿ ದೆಸೆಯಿಂದಲೇ ರಾಜ್ಯಶಾಸ್ತ್ರ, ನಿಷ್ಪಕ್ಷಪಾತ ಚುನಾವಣೆ, ನ್ಯಾಯಾಂಗ ಕಾರ್ಯಾಂಗ ಶಾಸಕಾಂಗಗಳ ಮೂಲಭೂತ ಕರ್ತವ್ಯಗಳ ಹೆಚ್ಚು ಹೆಚ್ಚು ತಿಳಿದುಕೊಳ್ಳಲು ಶಾಲಾ ಸಂಸತ್ ವಿದ್ಯಾರ್ಥಿಗಳಿಗೆ ಸಹಕಾರಿಯಾಗಿದೆ. ಚುನಾಯಿತ ಜನಪ್ರತಿನಿಧಿಗಳಾದವರು ಹೇಗೆ ನಿರಾಪೇಕ್ಷವಾಗಿ ಸಮಾಜಮುಖಿ ಕೆಲಸಗಳನ್ನ ನಿರ್ವಹಿಸಬೇಕು ಎಂಬುದರ ಬಗ್ಗೆಯೂ ಸಹ ತಿಳಿದುಕೊಳ್ಳಬಹುದಾಗಿದೆ ಎಂದರು.

## ಪೂರ್ಣಚಂದ್ರ ಶಾಲೆ ಮಕ್ಕಳಿಂದ ಪತ್ರಿಕಾ ದಿನಾಚರಣೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಪಟ್ಟಣದ ಪೂರ್ಣಚಂದ್ರ ಪಬ್ಲಿಕ್ ಶಾಲೆಯ ಮಕ್ಕಳು, ರೋಟರಿ ಕ್ಲಬ್ ಹಾಗೂ ರೆಡ್ ಕ್ರಾಸ್ ಪದಾಧಿಕಾರಿಗಳು ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಗೆ ಆಗಮಿಸಿ ಪತ್ರಿಕಾ ದಿನ ಆಚರಿಸಿದರು.

ಶಾಲೆಯ 30ಕ್ಕೂ ಹೆಚ್ಚು ಮಕ್ಕಳು ಪತ್ರಕರ್ತರೊಂದಿಗೆ ಬೆರೆತು ಮೊದಲ ಕನ್ನಡ ಪತ್ರಿಕೆ ಮಂಗಳೂರು ಸಮಾಚಾರ, ಆರಂಭ ಆ ದಿನಗಳನ್ನು ಸ್ಮರಿಸಿ, ಪತ್ರಿಕೆಯ ಬೆಳವಣಿಗೆ ಬಗ್ಗೆ ಅರಿವು ಪಡೆದರು. ಆಡಳಿತ ಅಧಿಕಾರಿ ಮಂಜುನಾಥ್ ಮಾತನಾಡಿ, ಸಮಾಜದಲ್ಲಿ ಪ್ರಮುಖವಾದ ಅಂಗ ಪತ್ರಿಕಾ ರಂಗವಾಗಿದ್ದು, ಪತ್ರಕರ್ತರ ಸಮಾಜ ಸೇವೆಯನ್ನು ಸ್ಮರಿಸಿದರು. ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸಿದ್ದರಾಜು, ಕಾರ್ಯದರ್ಶಿ ನಟೇಶ್ ಕಾಳೇನಹಳ್ಳಿ, ರಾಜ್ಯ ಪ್ರಶಸ್ತಿ ಪುರಸ್ಕೃತ ಪತ್ರಕರ್ತ ನಂದನ್ ಪುಟ್ಟಣ್ಣ ಸೇರಿದಂತೆ ತಾಲ್ಲೂಕಿನ ನಗರ ಹಾಗೂ ಗ್ರಾಮೀಣ ಭಾಗದ ಪತ್ರಕರ್ತರು ಪಾಲ್ಗೊಂಡಿದ್ದರು. ಇದೇ ವೇಳೆ ರೋಟರಿ ಕ್ಲಬ್ ನೂತನ ಅಧ್ಯಕ್ಷ ಜ್ಯೋತಿ ಅವರು, ಹಾಗೂ ತಂಡದೊಡನೆ ಪತ್ರಕರ್ತರ ದಿನಾಚರಣೆಯ ಶುಭಾಶಯ ತಿಳಿಸಿದರು.

ಉಚಿತವಾಗಿ ಗಿಡಗಳನ್ನು ನೀಡಿ ಮಾತನಾಡಿದ ಜ್ಯೋತಿ, ದೇಶದ ವಿವಿಧ ರಾಷ್ಟ್ರಗಳಲ್ಲಿ ರೋಟರಿ ಕ್ಲಬ್ ಸಮಾಜ ಸೇವೆಯನ್ನ ಮಾಡುತ್ತಿದ್ದು, ಪರಿಸರ ರಕ್ಷಣೆ, ನೀರಿನ ಸದ್ಬಳಕೆ, ಪ್ಲಾಸ್ಟಿಕ್ ನಿರ್ಮೂಲನೆ, ರಸ್ತೆ ಸಂಚಾರ ನಿಯಮ, ಶಿಕ್ಷಣ, ಆರೋಗ್ಯಕ್ಕೆ ಹೆಚ್ಚು ಆದ್ಯತೆ ನೀಡಿ ಕಾರ್ಯ ಮಾಡುತ್ತಿದೆ, ಪ್ರತಿ ವರ್ಷ ಜುಲೈ ಒಂದರಂದು ರೋಟರಿ ಸಂಸ್ಥೆಯ ನೂತನ ಪದಾಧಿಕಾರಿಗಳ ಆಯ್ಕೆ ಕಾರ್ಯ ನಡೆಯುತ್ತದೆ ಎಂದರು. ರೋಟರಿ ಸಂಸ್ಥೆಯ ಕಾರ್ಯದರ್ಶಿ ಹೇಮಚಂದ್ರ, ಮಾಜಿ ಸೈನಿಕ ಹಾಗೂ ಖಜಾಂಚಿ ವೆಂಕಟೇಶ್, ಪದ್ಮನಾಭ, ರೆಡ್ ಕ್ರಾಸ್ ಸಂಸ್ಥೆಯ ಛೇರ್ಮನ್ ಭರತ್‌ಕುಮಾರ್, ಕಾರ್ಯದರ್ಶಿ ಜಬೀಉಲ್ಲಾಬೇಗ್ ಮುಂತಾದವರಿದ್ದರು.

# ದುರಸ್ತಿ ಹಂತದಲ್ಲಿ ಜಿಲ್ಲೆಯ 801 ಶಾಲೆಗಳು

## 16.02 ಕೋಟಿ ರೂ. ಅನುದಾನಕ್ಕೆ ಪ್ರಸ್ತಾವನೆ : ಆತಂಕದಲ್ಲೇ ವಿದ್ಯಾರ್ಥಿಗಳ ಕಲಿಕೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಶಿಥಿಲಾವಸ್ಥೆ ತಲುಪಿರುವ ಶಾಲೆಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆಯಾದರೂ ರಿಪೇರಿ ಪ್ರಕ್ರಿಯೆ ಮಾತ್ರ ನಿಧಾನಗತಿಯಲ್ಲಿ ಸಾಗುತ್ತಿದೆ.

ಪ್ರಸಕ್ತ ಸಾಲಿನ ತರಗತಿಗಳು ಆರಂಭವಾಗಿ ತಿಂಗಳು ಕಳೆದರೂ ಸರ್ಕಾರದಿಂದ ಈ ವರೆಗೆ ಅನುದಾನ ಬಿಡುಗಡೆಯಾಗಿಲ್ಲ. ಮುರಿದ ಬಾಗಿಲು, ಸ್ವಲ್ಪ ಮಳೆಯಾದರೂ ಸೋರುವ ಕೊಠಡಿ, ಸುಣ್ಣಬಣ್ಣ ಕಾಣದ ಗೋಡೆಗಳಲ್ಲೇ ಮಕ್ಕಳು ವಿದ್ಯಾಭ್ಯಾಸ ಮಾಡುವಂತಾಗಿದೆ.



### 801 ಶಾಲೆಗಳಲ್ಲಿ ದುಸ್ಥಿತಿ

ಜಿಲ್ಲೆಯಲ್ಲಿ 2,218 ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿವೆ. ಅದರಲ್ಲಿ 218 ಶಾಲೆಗಳು ಸಂಪೂರ್ಣ ಶಿಥಿಲಾವಸ್ಥೆ ತಲುಪಿದ್ದು ತುರ್ತಾಗಿ ರಿಪೇರಿ ಆಗಲೇಬೇಕಿದೆ. ಇನ್ನು 801 ಶಾಲೆಗಳು ಭಾಗಶ: ರಿಪೇರಿ ಹಂತದಲ್ಲಿದ್ದು ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ. ಒಟ್ಟು 16.02 ಕೋಟಿ ರೂ. ವೆಚ್ಚದ ಕ್ರಿಯಾ ಯೋಜನೆ ಸಲ್ಲಿಸಲಾಗಿದೆ. ವಿದ್ಯಾರ್ಥಿಗಳು ಆತಂಕದಲ್ಲೇ ತರಗತಿಗೆ ಬರುತ್ತಿದ್ದಾರೆ. ಪೋಷಕರು ಸಹ ಜೀವಭಯದಲ್ಲೇ ತಮ್ಮ ಮಕ್ಕಳನ್ನು ವ್ಯಾಸಂಗಕ್ಕೆ ಕಳುಹಿಸಿಕೊಡಬೇಕಾಗಿದೆ.

### ಸಕಲೇಶಪುರದಲ್ಲಿ ಅಧಿಕ

ಸಾರ್ವಜನಿಕ ಶಿಕ್ಷಣ ಇಲಾಖೆ ತಯಾರಿಸಿರುವ ವರದಿ ಪ್ರಕಾರ ಜಿಲ್ಲೆಯ 801 ಶಾಲೆಗಳು ರಿಪೇರಿ ಹಂತದಲ್ಲಿದ್ದು ಅದರಲ್ಲಿ ಸಕಲೇಶಪುರ ತಾಲ್ಲೂಕಿಗೆ ಅಗ್ರ ಸ್ಥಾನದಲ್ಲಿದೆ. ಒಟ್ಟು 225 ಶಾಲೆಗಳು ಶಿಥಿಲಾವಸ್ಥೆ ತಲುಪಿವೆ. ಮಲೆನಾಡು ಭಾಗದಲ್ಲಿ ನಿರಂತರ ಮಳೆ, ಅನುದಾನದ ಕೊರತೆ ಹಾಗೂ ಜನಪ್ರತಿನಿಧಿಗಳ ನಿರ್ಲಕ್ಷ್ಯದಿಂದ ಶಾಲೆಗಳು ದಯನೀಯ ಸ್ಥಿತಿ ತಲುಪಿವೆ. ಯಾವಾಗಲೂ ಮಳೆ ಸುರಿಯುವುದರಿಂದ ಹೆಂಚುಗಳು ಬೇಗ ಹಾಳಾಗಿ ನೀರು ಸೋರುತ್ತವೆ. ಬಾಗಿಲುಗಳು ಸಹ ಅತಿ ಶೀತದಿಂದ ಬಹುಬೇಗ ಗುಣಮಟ್ಟ ಕಳೆದುಕೊಳ್ಳುತ್ತಿವೆ. ಈ ಬಗ್ಗೆ ಶಿಕ್ಷಕರು ಮೇಲಧಿಕಾರಿಗಳಿಗೆ ಅನೇಕ ಬಾರಿ ಮನವಿ ಸಲ್ಲಿಸಿದರೂ ಅನುದಾನ ಇಲ್ಲವೆಂಬ ಉತ್ತರಕ್ಕೆ ಸುಮ್ಮನಾಗಬೇಕಿದೆ.

### ತಾಲ್ಲೂಕುವಾರು ಮಾಹಿತಿ

ಆಲೂರು ತಾಲ್ಲೂಕಿನಲ್ಲಿ 16 ಶಾಲೆಗಳು ರಿಪೇರಿ ಹಂತದಲ್ಲಿದ್ದು 32 ಲಕ್ಷ ರೂ. ಅನುದಾನ ಅವಶ್ಯವಿದೆ. ಅರಕಲಗೂಡಿನಲ್ಲಿ 91 ಶಾಲೆಗಳ ಪಟ್ಟಿ ತಯಾರಿಸಿದ್ದು 1.82 ಕೋಟಿ ರೂ. ವೆಚ್ಚದ ಕ್ರಿಯಾ ಯೋಜನೆ ಸಲ್ಲಿಸಲಾಗಿದೆ. ಅರಸೀಕೆರೆ ತಾಲ್ಲೂಕಿನ 37 ಶಾಲೆಗೆ 74 ಲಕ್ಷ ರೂ., ಬೇಲೂರಿನ 120 ಶಾಲೆಗೆ 2.40 ಕೋಟಿ ರೂ., ಚನ್ನರಾಯಪಟ್ಟಣ ತಾಲ್ಲೂಕಿನ 161 ಶಾಲೆಗೆ 3.22 ಕೋಟಿ ರೂ., ಹಾಸನದ 86 ಶಾಲೆಗೆ 1.72 ಕೋಟಿ ರೂ. ವೆಚ್ಚದ ಕ್ರಿಯಾ ಯೋಜನೆ ಸಲ್ಲಿಕೆಯಾಗಿದೆ. ಹೊಳೆನರಸೀಪುರ ತಾಲ್ಲೂಕಿನ 65 ಶಾಲೆಗೆ 1.30 ಕೋಟಿ ರೂ. ಹಾಗೂ ಸಕಲೇಶಪುರ ತಾಲ್ಲೂಕಿನ 225 ಶಾಲೆಗೆ 4.50 ಕೋಟಿ ರೂ. ಅನುದಾನ ಬೇಕಿದೆ. ಶಿಕ್ಷಣ ಇಲಾಖೆ ಹಿರಿಯ ಅಧಿಕಾರಿಗಳ ಸೂಚನೆ ಮೇರೆಗೆ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮಾಹಿತಿ ತರಿಸಿ ಕೇಂದ್ರ ಕಚೇರಿಗೆ ರವಾನಿಸಲಾಗಿದೆ. ಈ ವರೆಗೆ ಯಾವ ಪ್ರತಿಕ್ರಿಯೆ ಬಂದಿಲ್ಲ ಎಂದು ಇಲಾಖೆ ಅಧಿಕಾರಿಗಳು ಹೇಳುತ್ತಾರೆ.

### ಲೆಕ್ಕದಲ್ಲಿ ತಾರತಮ್ಯ

ಸಾರ್ವಜನಿಕ ಶಿಕ್ಷಣ ಇಲಾಖೆ ನೀಡಿರುವ ಮಾಹಿತಿ ಪ್ರಕಾರ ಅರಸೀಕೆರೆ ತಾಲ್ಲೂಕಿನ 37 ಶಾಲೆಗಳಿಗೆ ರಿಪೇರಿ ಅವಶ್ಯಕತೆಯಿದೆ. ಆದರೆ ಸಾರ್ವಜನಿಕ ಮಾಹಿತಿ ಹಕ್ಕು ಅಡಿಯಲ್ಲಿ ಪಡೆದ ಮಾಹಿತಿ ಪ್ರಕಾರ 202 ಶಾಲೆಗಳು ದುಸ್ಥಿತಿ ತಲುಪಿವೆ.

ಅಂಕಿ ಸಂಖ್ಯೆ ನೀಡುವಲ್ಲೂ ಅಧಿಕಾರಿಗಳು ಜನರ ದಿಕ್ಕು ತಪ್ಪಿಸುತ್ತಿದ್ದಾರೆಂದು ಅರಸೀಕೆರೆಯ ವಕೀಲ ಕೆ.ಸಿ. ಶಿವರಾಜ್ ಆರೋಪಿಸಿದರು.

ಬಡಮಕ್ಕಳ ಬಗ್ಗೆ ಈ ಸರ್ಕಾರ ಹಾಗು ಅಧಿಕಾರಿಗಳಿಗೆ ಎಳ್ಳಷ್ಟು ಕಾಳಜಿ ಇಲ್ಲ. ತಮ್ಮ ಮಕ್ಕಳು ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಓದುತ್ತಾರೆಂಬ ಅಸಡ್ಡೆಯಿಂದ ಸರ್ಕಾರಿ ಶಾಲೆಗಳು ಮುಚ್ಚಿದರೂ ಪರವಾಗಿಲ್ಲ ಎಂಬ ಮನಸ್ಥಿತಿಯಲ್ಲಿದ್ದಾರೆ. ಸಂಬಳಕ್ಕಾಗಿ ಮಾತ್ರ ಕೆಲಸ ಮಾಡುವ ಅಧಿಕಾರಿಗಳಿಂದ ಸರ್ಕಾರಿ ಶಾಲೆಗಳ ಬಲವರ್ಧನೆ ಖಂಡಿತ ಸಾಧ್ಯವಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

> ಶಿಕ್ಷಣ ಇಲಾಖೆ ಸೂಚನೆ ಮೇರೆಗೆ ಶಿಥಿಲಾವಸ್ಥೆ ತಲುಪಿರುವ ಶಾಲೆಗಳ ಮಾಹಿತಿ ನೀಡಲಾಗಿತ್ತು. ರಿಪೇರಿಗಾಗಿ ಅಂದಾಜು ವೆಚ್ಚದ ಮಾಹಿತಿಯನ್ನು ನೀಡುವಂತೆ ತಿಳಿಸಿದ್ದರಿಂದ ಅದನ್ನು ಕಳುಹಿಸಲು ಸಿದ್ಧತೆ ನಡೆದಿದೆ. ಸರ್ಕಾರದ ಆದೇಶದಂತೆ ಕ್ರಮ ಕೈಗೊಳ್ಳಲಾಗುವುದು.
> 
> – ಹೆಚ್.ಎಸ್. ಚಂದ್ರಶೇಖರ್, ಡಿಡಿಪಿಐ

## ಇತಿಹಾಸದಲ್ಲಿ ಈ ದಿನ

### ಜುಲೈ-4

1947: ಭಾರತದ ಭವಿಷ್ಯದ ಆಡಳಿತ ರೂಪರೇಖೆ ರೂಪಿಸುವ ಉದ್ದೇಶದಿಂದ ಬ್ರಿಟಿಷ್ ಸಂಸತ್ತಿನಲ್ಲಿ ಇಂಡಿಯನ್ ಇಂಡಿಂಪೆಂಡೆನ್ಸ್ ಆಕ್ಟ್ ಅಂಗೀಕೃತವಾಯಿತು.

1975: ತುರ್ತು ಪರಿಸ್ಥಿತಿಯ ನಡುವೆ, ಪ್ರಧಾನ ಮಂತ್ರಿ ಇಂದಿರಾ ಗಾಂಧಿ ತಮ್ಮ ಸಂಪುಟ ಪುನರ್ ರಚನೆ ಮಾಡಿದರು.

1776: ಅಮೆರಿಕ ಸಂಯುಕ್ತ ಸಂಸ್ಥಾನವು ಬ್ರಿಟನ್‌ನಿಂದ ತನ್ನ ಸ್ವಾತಂತ್ರ್ಯ ಘೋಷಿಸಿತು. ಇದನ್ನು ಅಮೆರಿಕದ ಸ್ವಾತಂತ್ರ್ಯ ದಿನ ಎಂದು ಆಚರಿಸಲಾಗುತ್ತದೆ.

1886: ಅಮೆರಿಕಾದ ನ್ಯೂಯಾರ್ಕ್ ನದಿಯಲ್ಲಿ ಸ್ಥಾಪಿಸಲಾದ ಸ್ಟ್ಯಾಚು ಆಫ್ ಲಿಬರ್ಟಿಗೆ ಮೊದಲ ಬಾರಿ ಸಾರ್ವಜನಿಕ ಪ್ರವೇಶ ಲಭಿಸಿತು.

1997: ನಾಸಾ ಸಂಸ್ಥೆಯ ಪಾಥ್‌ಫೈಂಡರ್ ಉಪಗ್ರಹವು ಮಂಗಳ ಗ್ರಹದ ಮೇಲ್ಭಾಗವನ್ನು ಯಶಸ್ವಿಯಾಗಿ ಪ್ರವೇಶಿಸಿ ಭೂಮಿಗೆ ಚಿತ್ರಗಳನ್ನು ಕಳುಹಿಸಿತು.

1934: ಮರಳಿದ ಸ್ಟೀಮ್ ಶಿಪ್ ಆಜಿಯೋರ್ಜಿಕ್‌ಟಿ ಬೃಹತ್ ಹೋರಾಟದ ನಂತರ ಲಿವರ್‌ಪೂಲ್ ಬಂದರಿಗೆ ತಲುಪಿತು. ಇದು ಸಮುದ್ರದ ಮೇಲಿನ ಒಂದು ಪ್ರಮುಖ ರಕ್ಷಣಾ ಕಾರ್ಯವಾಗಿತ್ತು.

**ಜನನ**

1804: ನಾಥನಿಯಲ್ ಹೌಥೋಣರ್, ಪ್ರಸಿದ್ಧ ಅಮೆರಿಕನ್ ಕಾದಂಬರಿಕಾರ.

1898: ಗುಲ್ಜಾರಿ ಲಾಲ್ ನಂಡಾ, ಭಾರತ ಸರ್ಕಾರದ ದ್ವಿತೀಯ ಪ್ರಧಾನ ಮಂತ್ರಿ.

### ಮಲ್ನಾಡ್ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ

ಹಾಸನ: ನಗರದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಜು. 4 ಮತ್ತು 5 ರಂದು ಐಸಿಸಿಟಿಡಿಸಿ-2025 ತಂತ್ರಜ್ಞಾನ ಮತ್ತು ಡೇಟಾ ಸಂವಹನ ಕುರಿತು ಅಂತಾರಾಷ್ಟ್ರೀಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ.

ಶುಕ್ರವಾರ ಬೆಳಿಗ್ಗೆ 9.30ಕ್ಕೆ ಕಾರ್ಪೋರೇಟ್ ವ್ಯವಹಾರಗಳ ಡೀನ್ ಡಾ. ಎ. ಗೀತಾ ಕಿರಣ್ ಉದ್ಘಾಟಿಸುವರು. ಎಂಟಿಇಎಸ್ ಅಧ್ಯಕ್ಷ ಆರ್.ಟಿ. ದ್ಯಾವೇಗೌಡ, ಪ್ರಾಂಶುಪಾಲ ಡಾ. ಎ.ಜೆ. ಕೃಷ್ಣಯ್ಯ, ಉಪಾಧ್ಯಕ್ಷ ಅರ್ಜುನ್ ಗುರುದೇವ್, ಕಾರ್ಯದರ್ಶಿ ಸಿ.ಆರ್. ಜಗದೀಶ್, ಜಂಟಿ ಕಾರ್ಯದರ್ಶಿ ಜಿ.ಆರ್. ಶ್ರೀನಿವಾಸ್, ಖಜಾಂಚಿ ಹೆಚ್.ಡಿ. ಪಾರ್ಶ್ವನಾಥ್, ನಿರ್ದೇಶಕ ಡಾ. ಎಸ್. ಪ್ರದೀಪ್ ಭಾಗವಹಿಸುವರು.

ಥೈಲ್ಯಾಂಡ್‌ನ ಕಿಂಗ್ ಮೊಂಗ್ಕುಟ್ ತಾಂತ್ರಿಕ ವಿಶ್ವವಿದ್ಯಾಲಯದ ಡಾ. ವಾಚರಾ ರುವಾಂಗ್ಸಾಂಗ್, ಪುಣೆ ಕ್ಯಾಪ್‌ಜೆಮಿನಿ ಇಂಡಿಯಾದ ಹಿರಿಯ ಡೇಟಾ ಎಂಜಿನಿಯರ್ ಮೌನೇಶ್, ಯುಎಸ್‌ಎಯ ಸಂಶೋಧಕ ಮತ್ತು ಸಾಫ್ಟ್‌ವೇರ್ ಎಂಜಿನಿಯರ್ ಡಾ. ಕುಮಾರ್ ಮೈಕಾಲಾ ಮುಖ್ಯ ಭಾಷಣಕರಾರಾಗಿ ಭಾಗವಹಿಸಲಿದ್ದಾರೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248